**ದಿನಾಂಕಃ 25.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ಈಗ ನ್ಯಾಯಾಲಯದ ಮುಂದೆ ನಾನು 500 ರೂಗಳ ಒಟ್ಟು 20 ನೋಟುಗಳನ್ನು ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ಎಂ ಒ 6 ಎಂದು ಗುರುತುಪಡಿಸಿಕೊಳ್ಳಲಾಗಿದೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

ಎಸಿಬಿ ಕಛೇರಿಗೆ ನಾನು ಆ ದಿನ ಹೋದಾಗ ಮೊದಲು ಇನ್ಸ್ ಪೆಕ್ಟರ್ ಶೇಖರ್ ರವರನ್ನು ಭೇಟಿ ಆದೆ. ನಂತರ ಅವರು ದೂರುದಾರರನ್ನು ನನಗೆ ಮತ್ತು ಚಾ,ಸಾ. 2 ರವರಿಗೆ ಪರಿಚಯಿಸಿದರು. ದೂರುದಾರರು ನೀಡಿದ್ದ ದೂರನ್ನು ನಾನು ಓದಿ ತಿಳಿದುಕೊಂಡಿದ್ದೆ. ಅದರಂತೆ ದೂರುದಾರರಿಗೆ ಬರಬೇಕಾಗಿದ್ದ ಪ್ರತಿ ವರ್ಷದ increment arrears ನ್ನು ಏಕೆ ತಡೆ ಹಿಡಿಯಲಾಗಿದೆ ಎನ್ನುವುದನ್ನು ತಿಳಿದುಕೊಂಡೆ. ಅದರಂತೆ, ದೂರುದಾರರು ಕರ್ತವ್ಯದಲ್ಲಿದ್ದಾಗ ಮಾರ್ಗ ಮಧ್ಯದಲ್ಲಿ ಚೆಕ್ ಮಾಡಿದಾಗ ಟಿಕೇಟ್ ಹಂಚಿಕೆಯಲ್ಲಿ ಲೋಪ ಕಂಡು ಬಂದಿದ್ದು, ಈ ಬಾಬ್ತು ದೂರುದಾರರನ್ನು ಅಮಾನತ್ತು ಪಡಿಸಲಾಗಿತ್ತು ಎನ್ನುವುದು ತಿಳಿದು ಬಂತು. ದೂರುದಾರರಿಗೆ ಎಷ್ಟು ಬಾಕಿ increment arrears ಬರಬೇಕಾಗಿತ್ತು ಎನ್ನುವುದನ್ನು ನಾನು ತಿಳಿದುಕೊಳ್ಳಲಿಲ್ಲ.

2. ದೂರುದಾರರ ಜೇಬಿನಲ್ಲಿ ನೋಟುಗಳನ್ನು ಇಡುವ ಮುನ್ನ , ತನಿಖಾಧಿಕಾರಿಯವರು ನನ್ನ ಸಮಕ್ಷಮ ದೂರುದಾರರ ಜೇಬುಗಳಲ್ಲಿ ಬೇರೆ ಯಾವುದೇ

ಹಣ ಮತ್ತು ವಸ್ತು ಇರುವುದಿಲ್ಲ ಎನ್ನುವುದನ್ನು ಅಂಗ ಶೋದನೆ ಮಾಡಿ ಖಚಿತಪಡಿಸಿಕೊಂಡರು. ನಂತರ ದೂರುದಾರರ ಶರ್ಟ ನ ಎಡ ಜೇಬಿನಲ್ಲಿ ಫಿನಾಪ್ತಲೀನ್ ಲೇಪಿತ ನೋಟುಗಳನ್ನು ಇಡಲಾಗಿತ್ತು.

3. ನಾನು ಮುಖ್ಯ ವಿಚಾರಣೆಯಪುಟ ಸಂಖ್ಯೆ 7 ರಲ್ಲಿ ಹೇಳಿರುವಂತೆ, ದೂರುದಾರರು ಬಿಳಿಯ ಹಾಳೆಯಲ್ಲಿ ಬರೆದಿದ್ದ ಒಂದು Requisition ನ್ನು ಮಂಜುನಾಥರವರಿಗೆ ಕೊಟ್ಟರು. ಆದರೆ ಆ Requisition ನಲ್ಲಿ ಏನನ್ನು ಬರೆಯಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಆ Requisition ನ್ನು ಆರೋಪಿಗೆ ದೂರುದಾರರು ಕೊಡುವಾಗ ನಾನು ಅವರುಗಳು ಕೂತಿದ್ದ ಟೇಬಲ್ ನ ಎದುರುಗಡೆಯ ಇನ್ನೊಂದು ಟೇಬಲ್ ಗೆ ಸೇರಿದ ಚೇರ್ ನಲ್ಲಿ ಕುಳಿತಿದ್ದೆ. ಅಂದರೆ ದೂರುದಾರರಿಗೆ ಎದುರಾದಂತೆ ಕುಳಿತಿದ್ದೆ. ದೂರುದಾರರಿಂದ ನಾನು ಕುಳಿತಿದ್ದ ಸ್ಥಳಕ್ಕೆ 2 ರಿಂದ 3 ಅಡಿ ದೂರವಾಗುತ್ತಿತ್ತು ಅಷ್ಟೆ. ಅವರಿಬ್ಬರ ಸಂಭಾಷಣೆ ನನಗೆ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ಆ ಬಿಳಿಯ ಹಾಳೆಯನ್ನು ಆರೋಪಿಗೆ ಕೊಟ್ಟ ನಂತರ, ದೂರುದಾರರು ತಮ್ಮ ಕೈನಿಂದ ತಲೆ ಸವರಿಸಿಕೊಳ್ಳುವ ಮೂಲಕ ತನಿಖಾಧಿಕಾರಿಗೆ ಸನ್ನೆಯನ್ನು ನೀಡಿದ್ದರು. ಆಗ ತನಿಖಾಧಿಕಾರಿ ಮತ್ತು ಎಸಿಬಿ ಸಿಬ್ಬಂದಿ ಹೊಟೆಲ್ ಒಳಗೆ ಬಂದರು. ಆಗ ದೂರುದಾರರು ತನಿಖಾಧಿಕಾರಿಗೆ , ಇವರೇ ಮಂಜುನಾಥ , ಇವರೇ ನನ್ನಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟವರು , ಇವರಿಗೆ ನಾನು ಹಣವನ್ನು ಈಗ ಕೊಟ್ಟಿದ್ದೇನೆ , ಎಂದು ಹೇಳಿ ತೋರಿಸಿದರು. ಆಗ ಎಸಿಬಿ ಸಿಬ್ಬಂದಿ ಆರೋಪಿಯ ಎರಡೂ ಕೈಗಳನ್ನು ಹಿಡಿದುಕೂಂಡರು ಎನ್ನುವುದು ಸರಿ. ತನಿಖಾಧಿಕಾರಿ ಜೇಬಿನೊಳಗೆ ಇದ್ದ ಪೇಪರ್ ನಲ್ಲಿ ಹಣ ಇದೆ, ತೆಗೆಯಿರಿ ಎಂದು ಹೇಳಿ ತೆಗೆಸಿದರು

ಎನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ , "ನಂತರ ಆರೋಪಿ , ಬಸವರಾಜು ಕೊಟ್ಟಿದ್ದ ಆ ಬಿಳಿಯ Requisition ಪೇಪರ್ ನಲ್ಲೇ ಹಣವನ್ನು ಸುತ್ತಿಕೊಂಡು ತಮ್ಮ ಪ್ಯಾಂಟ್ ನ ಎಡ ಜೇಬಿನಲ್ಲಿ ಇಟ್ಟುಕೂಂಡ" ಎಂದು ಹೇಳಿರುತ್ತೇನೆ ಎನ್ನುವುದು ಸರಿ. ಆರೋಪಿ ದೂರುದಾರರಲ್ಲಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರಲಿಲ್ಲ ಎನ್ನುವುದು ಸರಿಯಲ್ಲ. ದೂರುದಾರರು ಹಣವನ್ನು Requisition letter ಎನ್ನುವ ಬಿಳಿಯ ಹಾಳೆಯಲ್ಲಿ ಇಟ್ಟು, ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತಾರೆ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಯವರು ಆ Requisition letter ನ ಬಿಳಿಯ ಹಾಳೆಯಲ್ಲಿ ಇಟ್ಟಿದ್ದ ಹಣವನ್ನು ಅಮಾನತ್ತು ಪಡಿಸಿಕೂಂಡಾಗ ನಾನು  ಆ Requisition letter  ಏನಿತ್ತು ಎನ್ನುವುದನ್ನು ಓದಿ ನೋಡಿರುವುದಿಲ್ಲ.

4. ತನಿಖಾಧಿಕಾರಿಯವರು ದೂರುದಾರರು ಧರಿಸಿದ್ದ ಶರ್ಟ ನ್ನು ಸಹ ಅಮಾನತ್ತು ಪಡಿಸಿಕೊಂಡರು. ಸಾಕ್ಷಿ ಪುನಃ ನುಡಿಯುತ್ತಾರೆ ಪ್ಯಾಂಟ್ ನ್ನು ಅಮಾನತ್ತು ಪಡಿಸಿಕೂಂಡಿದ್ದರು , ಆದರೆ ಫಿರ್ಯಾದುದಾರರು ಧರಿಸಿದ್ದ ಶರ್ಟ ನ್ನು ಅಮಾನತ್ತು ಪಡಿಸಿಕೂಂಡರೋ ಇಲ್ಲವೂ ಎನ್ನುವ ಬಗ್ಗೆ ನನಗೆ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ. ನಂತರ ತನಿಖಾಧಿಕಾರಿಯವರು ದಾಖಲಾತಿಗಳನ್ನು ತರಿಸಿಕೊಂಡಾಗ ಅಲ್ಲಿ ಹಾಜರುಪಡಿಸಿದ ಚೆಕ್ ನಲ್ಲಿ ಯಾರ ಸಹಿ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಆರೋಪಿಗೆ ಚಕ್ಕನ್ನು ವಿತರಿಸುವ ಅಧಿಕಾರವೇ ಇರಲಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , ದೂರುದಾರರು , ಆರೋಪಿಯೇ ತನಗೆ ಚೆಕ್ಕನ್ನು ವಿತರಿಸಬೇಕಾಗಿತ್ತು ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನಾನು

ಖುದ್ದು ಅಲ್ಲಿ , ಆರೋಪಿಗೆ ಚೆಕ್ಕನ್ನು ವಿತರಿಸುವ ಅಧಿಕಾರ ಇತ್ತೋ, ಇಲ್ಲವೋ ಎನ್ನುವುದನ್ನು ತಿಳಿದುಕೂಂಡಿರುವುದಿಲ್ಲ.

5. ಆ ಡಿಪೋ ದಲ್ಲಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಪ್ರಕ್ರಿಯ ಸಂಜೆ 05.45 ರಿಂದ ರಾತ್ರಿ 09.45 ರ ವರೆಗೆ ನಡೆಯಿತು. ಟ್ರಾಪ್ ಗೆ ಹೋಗುವ ಮುನ್ನ ಎಸಿಬಿ ಕಛೇರಿಯಲ್ಲಿ ನಡೆದ ಪ್ರಕ್ರಿಯ ಮಧ್ಯಾಹ್ನ 01.00 ಗಂಟೆಯಿಂದ 03.00 ಗಂಟೆಯವರೆಗೆ ನಡೆದಿತ್ತು.

6. ಆರೋಪಿ, ದೂರುದಾರರಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರಲಿಲ್ಲ ಎನ್ನುವುದು ಸರಿಯಲ್ಲ. ದೂರುದಾರರು ಬಿಳಿಯ Requisition letter ನಲ್ಲಿ ಹಣವನ್ನು ಇಟ್ಟು, ಆರೋಪಿಯ ಜೇಬಿನಲ್ಲಿ ಬಲವಂತವಾಗಿ ಇಟ್ಟು, ಈ ಪ್ರಕರಣದಲ್ಲಿ ಆರೋಪಿಯನ್ನು ಸಿಲುಕಿಸಿರುತ್ತಾರೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.